ಪ್ರಶ್ನೆ ಸಂಖ್ಯೆ: 33 (265)
ಶ್ರೀ.ಗೋಪಾಲಕೃಷ್ಣ ಬೇಳೂರು (ಸಾಗರ)
(ಮಾನ್ಯ ಸದಸ್ಯರು ಗೈರುಹಾಜರಿದ್ದರು)
ಪ್ರಶ್ನೆ ಸಂಖ್ಯೆ: 34 (262)
ಶ್ರೀ ಎ.ಮಂಜು (ಅರಕಲಗೂಡು)
(ಮಾನ್ಯ ಸದಸ್ಯರು ಗೈರು ಹಾಜರಿದ್ದರು)
ಪ್ರಶ್ನೆ ಸಂಖ್ಯೆ: 35 (210)
ಶ್ರೀ ಬಂಡೆಪ್ಪ ಖಾಶೆಂಪೂರ (ಬೀದರ ದಕ್ಷಿಣ)
(ಮಾನ್ಯ ಸದಸ್ಯರು ಗೈರುಹಾಜರಿದ್ದರು)

ಎಲ್.ಎಂ.ಪಿ. ಯೋಜನೆಯ ಕಾಲುವೆ ಸುಧಾರಣೆಗಾಗಿ ಹಣ ಬಿಡುಗಡೆ

36 : (347)

ಡಾ: ಶರಣಪ್ರಕಾಶ್ ರುದ್ರಪ್ಪ ಪಾಟೀಲ್ (ಸೇಡಂ)

ಅ) ಎಲ್.ಎಂ.ಪಿ. (Lower Mullamari Project) ಯೋಜನೆ ಕಿ.ಮೀ. 0.00 ರಿಂದ 80.00 ಕಿ.ಮೀ.ವರೆಗಿನ ಕಾಲುವೆ ಸುಧಾರಣೆ ಸಲುವಾಗಿ ರೂ.40.00 ಕೋಟಿ (ನಲವತ್ತು ಕೋಟಿ) ಗಳ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ?

ಆ) ಹಾಗಿದ್ದಲ್ಲಿ, ಯಾವಾಗ ಮಂಜೂರು ಮಾಡಿ ಕೆಲಸ ಪೂರ್ಣಗೊಳಿಸುವುದು? (ವಿವರ ನೀಡುವುದು)

ಶ್ರೀ ಬಸವರಾಜ ಬೊಮ್ಮಯಿ (ಜಲಸಂಪನ್ಮೂಲ ಸಚಿವರು)

ಅ) ಹೌದು. ಆದರೆ ಪ್ರಸ್ತಾವನೆಯು. 40 ರಿಂ 80 ಕಿ.ಮೀ.ವರೆಗಿನ ಕಾಲುವೆ ಸುಧಾರಣೆ ಸಲುವಾಗಿ ಇದ್ದು, ಸದರಿ ಪ್ರಸ್ತಾವನೆಯ ಅಂದಾಜು ತಯಾರಿಸಿದ್ದು, ಪರಿಶೀಲನಾ ಹಂತದಲ್ಲಿ ಇರುತ್ತದೆ.

ಆ) ಸದರಿ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಮತ್ತು ತಾಂತ್ರಿಕ ಮಂಜೂರಾತಿಯನ್ನು ಫೆಬ್ರವರಿ 2013ರೊಳಗೆ ನೀಡಿ, ಶೀಘ್ರವಾಗಿ ಕಾಮಗಾರಿಗಳನ್ನು ಕೈಗೆತ್ತಿಕೊಂಡು ಪೂರ್ಣಗೊಳಿಸಲಾಗುವುದು.

ಡಾ: ಶರಣಪ್ರಕಾಶ್ ರುದ್ರಪ್ಪ ಪಾಟೀಲ್ (ಸೇಡಂ) : ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಇದರಲ್ಲಿ ನನ್ನ ಕಳಕಳಿ ಏನೆಂದರೆ, ಈ ಒಂದು ಯೋಜನೆ ಬಹಳ ವರ್ಷಗಳಿಂದ ನೆನೆಗುದಿಗೆ ಬಿದ್ದಿರುವಂತಹದ್ದು. ಸುಮಾರು 20 ವರ್ಷಗಳಿಂದ ಈ ಯೋಜನೆ ನಡೆಯುತ್ತಿದೆ. ಹೊಸದಾಗಿ ಚಿಂಚೋಳಿ ಭಾಗದ 31 ಹಳ್ಳಿಗಳು ನನ್ನ ಮತಕ್ಷೇತ್ರದಲ್ಲಿ ಬಂದಿದ್ದರಲ್ಲಿ ಈ ಯೋಜನೆ ಇದೆ. ನಾನು ಹಿಂದೆಯೂ ಒಂದು ಬಾರಿ ಮನವಿ ಮಾಡಿದ್ದೆ. ರೈತರು ಬಹಳವರ್ಷಗಳಿಂದ ನೀರನ್ನು ನಿರೀಕ್ಷೆ ಮಾಡುತ್ತಿದ್ದಾರೆ. ಕಾಲುವೆ correction ಆಗದೇ ಇದನ್ನು ಮಾಡವುದಕ್ಕೆ ಆಗುವುದಿಲ್ಲವೆಂದು ನಾನು request ಮಾಡಿದ್ದರಿಂದ ಸುಮಾರು 40 ಕೋಟಿ ರೂ.ಗಳ ಎಸ್ಟಿಮೇಟ್ ಇವತ್ತು ಸರ್ಕಾರದ ಮುಂದಿದೆ. ನನ್ನ ಕಳಕಳಿ ಏನೆಂದರೆ, ಈ ಒಂದು working period ಏನಿದೆ, ಒಂದು ವೇಳೆ ಫೆಬ್ರವರಿ ತಿಂಗಳಿನಲ್ಲಿ ಟೆಂಡರ್ ಕರೆದಿದ್ದರೆ, working season ನಲ್ಲಿ ಅಂದರೆ ಜೂನ್‌ತಿಂಗಳೊಳಗೆ ಮಳೆ ಬರುವ ತಿಂಗಳಿನೊಳಗೆ ಕೆಲಸ ಮಾಡಲಿಕ್ಕೆ ಸಾಧ್ಯವಾಗುತ್ತದೆ. ಇದು ತಡವಾಗಿ ಮಾರ್ಚ್, ಏಪ್ರಿಲ್‌ನಲ್ಲಿ ಮಾಡಿದರೆ, ಇನ್ನೂ ಒಂದು ವರ್ಷ ಮುಂದೆ ಹೋಗುತ್ತದೆ. ಆದ್ದರಿಂದ code of conduct ಜಾರಿಯಾಗುವುದಕ್ಕಿಂತ ಮೊದಲೇ ಟೆಂಡರ್ ಕರೆಯುವ ಕೆಲಸ ಮಾಡಬೇಕು. ಇಲ್ಲವೆಂದರೆ, working season ಸಿಗುವುದಿಲ್ಲ ಕೆಲಸವಾಗುವುದಿಲ್ಲ ಎಂದು ನನ್ನ ಕಳಕಳಿ. ಅದಕ್ಕೆ ಮಾನ್ಯ ಸಚಿವರು ಸ್ಪಂದಿಸಬೇಕು ಎನ್ನುವುದು ನನ್ನ ಮನವಿ.

ಶ್ರೀ ಬಸವರಾಜ್ ಎಸ್.ಬೊಮ್ಮಾಯಿ : ಮಾನ್ಯ ಅಧ್ಯಕ್ಷರ, ಮಾನ್ಯ ಸದಸ್ಯರು ಹೇಳಿದ ಹಾಗೆ, ಇದು ಬಹಳ ಹಳೆಯ ಯೋಜನೆ. 0–40 ವರೆಗೆ ಈಗಾಗಲೇ ನೀರನ್ನು ಕೊಡುತ್ತಿದ್ದೇವೆ. ಅದರಲ್ಲೂ ಕೂಡ distributory-34 ನಲ್ಲಿ ಕೆಲವು ರೈತರು ಅಡ್ಡಗೋಡೆಯನ್ನು ಹಾಕಿ ಬಹಳ ತೊಂದರೆಯನ್ನು ಮಾಡಿದ್ದರು. ಸೇಡಂನಲ್ಲಿ ಪರಿಶೀಲನೆ ಸಭೆಗೆ ಹೋದಾಗ, ಶಾಸಕರು ನನ್ನ ಗಮನಕ್ಕೆ ತಂದ ಮೇಲೆ, ಅದನ್ನು ತೆಗೆದುಹಾಕಿಸಿ ಆ distributor ನಲ್ಲಿ ನೀರು ಬರುವ ವ್ಯವಸ್ಥೆಯನ್ನು ಮಾಡಿದ್ದೇವೆ ಮತ್ತು 40–80 ರವರೆಗೆ ಏನಿದೆ, ಇದನ್ನು selective ಆಗಿ ತೆಗೆದುಕೊಂಡಿದ್ದರು. Comprechensive ಆಗಿ ಮಾಡಬೇಕೆಂದು ಶಾಸಕರು ಒತ್ತಾಯ ಮಾಡಿದರು. ನಾವೂ ಕೂಡ

ಆದೇಶವನ್ನು ಕೊಟ್ಟಿದ್ದೇವೆ. ಆ ಆದೇಶದ ಪ್ರಕಾರ estimation ಬಂದಿದ್ದು ಎಂ.ಡಿಯವರ ಹತ್ತಿರ ಇದೆ. ನಾನು ಈಗಾಗಲೇ ಉತ್ತರ ಕೊಟ್ಟಂತೆ ಈ session ಆದ ತಕ್ಷಣ, ಮಾನ್ಯ ಮುಖ್ಯಮಂತ್ರಿಯವರಿಗೆ ನಿಗಮದ ಮಂಡಳಿಯ ಸಭೆ ಕರೆಯಬೇಕೆಂದು ಹೇಳಿದ್ದೇನೆ. ಇನ್ನು 15 ದಿವಸದೊಳಗೆ ಸಭೆಯಲ್ಲಿ ಅನುಮೋದನೆ ಮಾಡಿ, ಒಟ್ಟಾರೆ, ಈ ತಿಂಗಳ ಕೊನೆಯೊಳಗೆ ಅದಕ್ಕೆ ಟೆಂಡರ್ ಪ್ರಕ್ರಿಯೆಯನ್ನು ನಾವು ಪ್ರಾರಂಭ ಮಾಡುತ್ತೇವೆ.

ಅಧ್ಯಕ್ಷರು: ಮಾನ್ಯ ಹೆಚ್.ಡಿ.ರೇವಣ್ಣನವರ ಪರವಾಗಿ ಮಾನ್ಯ ವೆಂಕಟರಾವ್ ನಾಡಗೌಡರು ಪ್ರಶ್ನೆ ಕೇಳುವುದು.

ಜವಳಿ ಉದ್ಯಮದ ಪುನ:ಶ್ಚೇತನ

37 (95)

ಶ್ರೀ ರೇವಣ್ಣ ಹೆಚ್.ಡಿ (ಹೊಳೇನರಸೀಪುರ).

ಅ) ರಾಜ್ಯದಲ್ಲಿ ಜವಳಿ ಉದ್ಯಮವು ಅಳಿವಿನ ಅಂಚಿಗೆ ತಲುಪುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದಲ್ಲಿ ಜವಳಿ ಉದ್ಯಮದ ಪುನಶ್ಚೇತನ ಹಾಗೂ ಉತ್ತೇಜನಕ್ಕಾಗಿ ಸರ್ಕಾರವು ಕೈಗೊಂಡಿರುವ ಕ್ರಮಗಳಾವುವು?

ಆ) ಕಳೆದ ಮೂರು ವರ್ಷಗಳಲ್ಲಿ ಜವಳಿ ಉದ್ಯಮದ ಪುನಶ್ಚೇತನಕ್ಕಾಗಿ ಸರ್ಕಾರವು ಮೀಸಲಿಟ್ಟ ಹಾಗೂ ಖರ್ಚು ಮಾಡಿದ ಹಣವೆಷ್ಟು? (ಸಂಪೂರ್ಣ ಮಾಹಿತಿ ನೀಡುವುದು.).

ಶ್ರೀ ಆರ್.ವರ್ತೂರು ಪ್ರಕಾಶ್

(ಜವಳಿ ಸಚಿವರು)

ಅ) ರಾಜ್ಯದಲ್ಲಿ ಜವಳಿ ಉದ್ಯಮವು ಅಳಿವಿನ ಅಂಚಿಗೆ ತಲುಪುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ, ಅದಾಗ್ಯೂ ಜವಳಿ ಉದ್ಯಮದ ಅಭಿವೃದ್ಧಿಗಾಗಿ ಈ ಕೆಳಕಂಡ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.